


ಮತ್ತೊಂದು ಊರಿನ ಪ್ರವೇಶವಾಯಿತು. ಹುಣಸೇಮರದಡಿ ಕುಳಿತಿದ್ದ ಯುವಕನಿಗೆ ಕುಡಿಯಲು ನೀರು ಕೇಳಿದಾಗ; ತಂಬಿಗೆ ತುಂಬಾ ಕೆಂಪು ಮಿಶ್ರಿತ ನೀರು ತಂದುಕೊಟ್ಟ. ಅದು ಹಳ್ಳದ ನೀರಾಗಿತ್ತು. ಮುಖ ನೋಡಿದಾಗ; 'ಮಂಚ್ಚಿ ನೀಳ್ಲು ಅಂಟೆ ಇದೇ ಅನ್ನಾ' (ಒಳ್ಳೇ ನೀರು ಅಂದರೆ ಇದೇ ಅಣ್ಣಾ) ಅಂದ. ನಿಮ್ಮ ಹಳ್ಳಿಗಳಲ್ಲಿ ಫಿಲ್ಟರ್ ನೀರು ಸಿಗೋದಿಲ್ವೆ ಅಂದೆ. 'ಅಂಥ ಭಾಗ್ಯ ಇನ್ನೂ ಬಂದಿಲ್ಲ' ಅಂದ. ಆ ಯುವಕನ ಕಣ್ಣೋಟದಲ್ಲಿ ಅಸಹಾಯಕತೆ ಇಣುಕಿತು.

ರಾಜ್ಯದ ಬರಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು ಭಾಗಕ್ಕೆ ಶುದ್ಧ ಕುಡಿಯುವ ನೀರು ಸಿಗಬೇಕು. ಶ್ರೀನಿವಾಸ್ ಸಂಕಲ್ಪ ಕೂಡ ಇದೇ. ದೆಹಲಿವರೆಗೂ ಕೈಗೊಂಡಿರುವ ಯಾತ್ರೆ ಔಚಿತ್ಯವನ್ನು ವಿದ್ಯಾವಂತನಾದ ತರುಣನಿಗೆ ಮನದಟ್ಟು ಮಾಡಿ ಮುಂದೆ ಸಾಗಿದರು.

ಆ ಭಾಗದಲ್ಲಿ ಎಲ್ಲವೂ ಫ್ಲೋರೈಡ್ ನೀರು. ವಿದ್ಯುತ್ ಕಾಣದ ಕುಗ್ರಾಮಗಳು, ಭೂಮಾಲೀಕರ ಪಾರಮ್ಯದಲ್ಲಿರುವ ಹಳ್ಳಿಗಳು ಇನ್ನೂ ಇವೆ ಎಂಬುದು ತಿಳಿಯಿತು. ಮತ್ತೊಂದೆಡೆ ತೆಲಂಗಾಣ, ಮಹಾರಾಷ್ಟ್ರ ಗಡಿಯಲ್ಲಿ ವಿಭಿನ್ನ ಸಾಂಸ್ಕೃತಿಕ ಪರಿಸರವೂ ಪರಿಚಯವಾಯಿತು. ಹೊಲ, ಗದ್ದೆಗಳಲ್ಲಿ ದುಡಿಯುವ ರೈತರು ಸೈಕಲ್ ಯಾತ್ರೆಯ ಕುಶಲ ವಿಚಾರಿಸಿ ಶುಭ ಹಾರೈಸಿದರು. ಹೆದ್ದಾರಿ ಪಕ್ಕದ ಗ್ರಾಮೀಣ ತಾಯಂದಿರು ನೀರು, ಬೆಲ್ಲ, ಮಜ್ಜಿಗೆ ಕೊಟ್ಟು ಅಕ್ಕರೆಯಿಂದ ಬೀಳ್ಕೊಟ್ಟ ಸವಿ ಗಳಿಗೆಗಳನ್ನೂ ಶ್ರೀನಿವಾಸ್ ನೆನೆದರು.

'ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶ ರಾಜ್ಯಗಳನ್ನು ಹಾದು ಹೋಗುವಾಗ ವಿಪರೀತ ಬಿಸಿಲು. ರಾತ್ರಿ ಥಂಡಿ. ದೇಹ ಹೈರಾಣಾಯಿತು. ಸರಿಯಾದ ಊಟ, ನಿದ್ದೆ ಇಲ್ಲದಂತಾಯಿತು. ಗಮ್ಯ ತಲುಪುವ ಕಾತುರದಲ್ಲಿ ಎಲ್ಲವೂ ನಗಣ್ಯವಾಯಿತು. ಮಧ್ಯಪ್ರದೇಶದ ಹಳ್ಳಿಯೊಂದರಲ್ಲಿ ಅರ್ಧ ಕೆ.ಜಿ. ಅನ್ನವನ್ನು ನೂರ ಇಪ್ಪತ್ತು ರೂಪಾಯಿಗೆ ತೂಕ ಮಾಡಿಕೊಟ್ಟರು! ಅಲ್ಲಿನ ಮೇಲ್ಸೇತುವೆಗಳೇ ನಿರಾಶ್ರಿತರ ಜೋಪಡಿಗಳು. ಉತ್ತರ ರಾಜ್ಯಗಳಲ್ಲಿನ ನಿರುದ್ಯೋಗ, ವಲಸೆ, ಬಡತನ, ಹಸಿವು ಎಷ್ಟೊಂದು ಬದುಕಿನ ಪುಟಗಳನ್ನು ಪರಿಚಯಿಸಿತು'.


ಶಾಲಾ ಮಕ್ಕಳಿಗೆ ಆಟೋಟ ಕಲಿಕೆ

''ದೆಹಲಿ ಕರೋಲ್‌ಬಾಗ್ ಪ್ರದೇಶದಲ್ಲಿದ್ದ ಕೊಳೆಗೇರಿ ಕಂಡು ಭಾರತ ಪ್ರಕಾಶಿಸುತ್ತಿರುವುದು ಅಂದರೆ ಇದೇನಾ? ಹೀಗೊಂದು ಪ್ರಶ್ನೆ ಮೂಡಿತು. ಒಡೆದ ಕನ್ನಡಿಯ ಚೂರೊಂದನ್ನು ಮರಕ್ಕೆ ನೇತು ಹಾಕಿದ್ದ ಕ್ಷೌರದ ಅಂಗಡಿ ಕಂಡೆ. ಮುರಿದ ಕುರ್ಚಿಯ ಒಂದು ಕಾಲಿಗೆ ಕಲ್ಲಿನ ಚೂರೊಂದು ಹೆಗಲು ಕೊಟ್ಟಿತ್ತು. ಮರದ ನೆರಳೇ ಕ್ಷೌರದ ಅಂಗಡಿಗೆ ಆಸರೆ. ಬಡಪಾಯಿ ಕ್ಷೌರಿಕ ಸ್ವಾಭಿಮಾನದಿಂದ ಕಾಯಕದಲ್ಲಿ ತೊಡಗಿದ್ದ. ಅನತಿ ದೂರದಲ್ಲೇ ಇದ್ದ ಮೊಬೈಲ್ ಮಳಿಗೆಗೆ ಹೋದಾಗ; ಮುಸ್ಲಿಂ ಯುವ ವ್ಯಾಪಾರಿಯೊಬ್ಬ ನೀಲಿ ಬಾವುಟ ಕಂಡು 'ಜೈಭೀಮ್' ಎಂದಾಗ ಭಾವುಕನಾದೆ''.

'ಆಗಿನ ಕೇಂದ್ರ ಜಲಸಂಪನ್ಮೂಲ ಸಚಿವೆ ಉಮಾಭಾರತಿ ಅವರನ್ನು ಕಾಣಲು ಹೋದಾಗ ಸಿಬ್ಬಂದಿ ಸೈಕಲ್ ಸಮೇತ ನಮ್ಮನ್ನು ಹೊರದಬ್ಬಿದರು. ಆಗ ಖುದ್ದು ಉಮಾಭಾರತಿ ಅವರೇ ಬಂದು ಯಾತ್ರೆ ಬಗ್ಗೆ ವಿಚಾರಿಸಿ ಸೈಕಲ್‌ಗಳ ಜತೆ ಒಳಗೆ ಬರಲು ಅನುಮತಿ ಸೂಚಿಸಿದರು. ಮನವಿ ಆಲಿಸಿ, ಈ ಉದ್ದೇಶ ಸಫಲತೆ ಕಾಣಲಿ ಎಂದು ಹಾರೈಸಿದರು. ನಂತರ ಪ್ರಧಾನಿ ಮತ್ತು ರಾಷ್ಟ್ರಪತಿ ಕಚೇರಿಗೂ ಮನವಿ ಸಲ್ಲಿಸಲು ಅವಕಾಶ ಸಿಕ್ಕಿತು'.

'5 ಸಾವಿರ ಕಿ.ಮೀ. ದೂರದ ದೆಹಲಿಯನ್ನು 17 ದಿನದೊಳಗೆ ತಲುಪಿದೆ. ದೇಹ ದಣಿದರೂ ನಿಜವಾದ ಭಾರತ ದರ್ಶನವಾಯಿತು...' ಶ್ರೀನಿವಾಸ್ ತಮ್ಮ ಮೊದಲ ಸೈಕಲ್ ಜಾಗೃತಿ ಯಾತ್ರೆ ಅನುಭವಗಳನ್ನು ಹರವಿಕೊಂಡು ನಿಟ್ಟುಸಿರುಬಿಟ್ಟರು.

ಇಂತಹದ್ದೇ ಸದುದ್ದೇಶದಿಂದ 2024ರಲ್ಲಿ ಕೋಲಾರದಿಂದ ಮಹಾರಾಷ್ಟ್ರದ ನಾಗಪುರ (ದೀಕ್ಷಾ ಭೂಮಿ)ವರೆಗೂ ಸೌಹಾರ್ದ ಭಾರತಕ್ಕಾಗಿ 1200 ಕಿ.ಮೀ. ಒಬ್ಬರೇ ಸೈಕಲ್ ಯಾತ್ರೆ ನಡೆಸಿದರು. ಮೊದಲ ಯಾತ್ರೆಯ ದಟ್ಟ ಅನುಭವಗಳು ಈ ಸಲ ಅವರಿಗೆ ಕಾಡಲಿಲ್ಲ. ಊಟ, ವಸತಿಗೆ ಮೊದಲೇ ತಯಾರಿ ಮಾಡಿಕೊಂಡೇ ಹೊರಟಿದ್ದರು. ತೆಲಂಗಾಣದ ಕಾಮರೆಡ್ಡಿ ಜಿಲ್ಲೆಯ ದಟ್ಟ ಅರಣ್ಯದ ಹೆದ್ದಾರಿಯಲ್ಲಿ ಸಾಗುವಾಗ ಕತ್ತಲು ಕವಿದಿತ್ತು. ಕಾಡೆಮ್ಮೆಯೊಂದು ದಾರಿಗೆ ಅಡ್ಡಲಾಗಿ ದಾಳಿ ನಡೆಸಲು ಮುನ್ನುಗ್ಗಿತು. ಶರವೇಗದಲ್ಲಿ ಸೈಕಲ್ ತುಳಿಯುತ್ತಾ ಪಾರಾದ ಆ ಕ್ಷಣಗಳ ಭಯವನ್ನು ಹಂಚಿಕೊಂಡರು.

ಇವರ ಯಾತ್ರೆ ಇಷ್ಟಕ್ಕೆ ಮುಗಿಯೋದಿಲ್ಲ. 2024ರಲ್ಲಿ ಸಂವಿಧಾನಕ್ಕೆ ಆಪತ್ತು ಎದುರಾಗಿದೆ ಎಂಬ ಬಲವಾದ ಕೂಗು ದೇಶದಲ್ಲಿ ಹಬ್ಬುತ್ತದೆ. ಆಗ ಕೋಲಾರದಿಂದ ಮುಂಬೈ (ಚೈತನ್ಯಭೂಮಿ) ವರೆಗೂ 1,100 ಕಿ.ಮೀ. 'ಸಂವಿಧಾನ ರಕ್ಷಿಸಿ, ಪ್ರಜಾಪ್ರಭುತ್ವ ಉಳಿಸಿ' ಸಂದೇಶ ಹೊತ್ತು ಸಾಗಿದರು. ಮಾರ್ಗ ಮಧ್ಯೆ ಹೈದರಾಬಾದ್‌ನಲ್ಲಿ ಪ್ರಜಾಕವಿ ಗದ್ದರ್ ಅವರ ಮಗ ಸೂರ್ಯಕಿರಣ್ ಅವರನ್ನು ಭೇಟಿ ಮಾಡಿದರು. ಸಂವಿಧಾನ ರಕ್ಷಣೆ ಬಗ್ಗೆ ಚರ್ಚಿಸಿದರು.

75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಹಾಗೂ ಸಾಲುಮರದ ತಿಮ್ಮಕ್ಕ ಅವರ ಕಾರ್ಯ ಸ್ಮರಣೆಗೆ 2022ರಲ್ಲಿ ಬೀದರ್‌ವರೆಗೂ ಸೈಕಲ್ ಯಾತ್ರೆ ನಡೆಸಿದರು. ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಲು ಜಾಗೃತಿ ಕೈಗೊಂಡರು. 2025ರಲ್ಲಿ ಕೋಲಾರದಿಂದ ಮೈಸೂರಿನವರೆಗೂ ಸಮಾನತೆ ಸಂದೇಶದೊಂದಿಗೆ 12 ಗಂಟೆಗಳಲ್ಲಿ 254 ಕಿ.ಮೀ. ಸೈಕಲ್‌ನಲ್ಲಿ ಸಂಚರಿಸಿ ದಾಖಲೆ ನಿರ್ಮಿಸಿದರು. ಪರಿಸರ ಜಾಗೃತಿಗಾಗಿ ರಾಜ್ಯದಾದ್ಯಂತ 2,500 ಕಿ.ಮೀ. ಯಾತ್ರೆ ನಡೆಸಿದ ದಾಖಲೆಯೂ ಇವರದ್ದೇ.

ಕೇವಲ ಸೈಕಲ್ ಯಾತ್ರೆ ಅಷ್ಟೇ ಅಲ್ಲ; ಮಾರ್ಗ ಮಧ್ಯೆ ಶಾಲಾ ಕಾಲೇಜುಗಳಿಗೆ ಭೇಟಿ ಕೊಟ್ಟು ಪರಿಸರದ ಬಗ್ಗೆ ಅರಿವು ಮೂಡಿಸುವ ಪರಿಪಾಟವೂ ಇದೆ. ಅಥ್ಲೀಟ್ ಆಗಿಯೂ ಹಲವು ದೇಶಗಳನ್ನು ಸುತ್ತಿ ಬಂದಿದ್ದಾರೆ. ಮಲೇಷ್ಯಾ, ಶ್ರೀಲಂಕಾ, ನೇಪಾಳ ದೇಶಗಳಲ್ಲಿ ನಡೆದ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡು ಹಲವು ಪದಕಗಳ ಪುರಸ್ಕೃತರಾಗಿದ್ದಾರೆ.

ಅಥ್ಲೀಟ್, ಅಂತರರಾಷ್ಟ್ರೀಯ ಕ್ರೀಡೆ, ಪರಿಸರ, ಸಾಮಾಜಿಕ ಜಾಗೃತಿ ಇವರ ಟ್ಯಾಗ್‌ಲೈನ್. ಸೈಕಲ್ ಜಾಗೃತಿ ಯಾತ್ರೆ ಮೂಲಕ ಈಗಾಗಲೇ ದೇಶದಾದ್ಯಂತ ಹತ್ತು ಸಾವಿರ ಕಿ.ಮೀ. ಸಂಚರಿಸಿದ್ದಾರೆ ಶ್ರೀನಿವಾಸ್. ಅವರ ಮೊದಲ ಸೈಕಲ್ ಯಾತ್ರೆಗೆ ರೋಟರಿ ನೆರವು ನೀಡಿದೆ. ವೃತ್ತಿಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಹಲವು ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ.

ವಯಸ್ಸು 60 ಆದರೂ ಮೂವತ್ತು ವರ್ಷದ ಯುವಕನಂತೆ ದೇಹವನ್ನು ಈಗಲೂ ಕಟ್ಟುಮಸ್ತಾಗಿ ಇಟ್ಟುಕೊಂಡಿದ್ದಾರೆ. 'ಇನ್ನೂ ಹಲವು ಸಾಮಾಜಿಕ ಜಾಗೃತಿ ಸೈಕಲ್ ಯಾತ್ರೆಗಳನ್ನು ನಡೆಸುವ ಕಸುವು ನನ್ನ ದೇಹಕ್ಕಿದೆ' ಎಂದು ಉತ್ಸಾಹದಿಂದ ಮಾತು ಮುಗಿಸಿದರು.